# ಸಮಾಜ ವಿಜ್ಞಾನ ಮಾದರಿ ಪ್ರಶ್ನಾ ಪತ್ರಿಕೆ -3

ಅ.ಈ ಕೆಳಗಿನ ಹೇಳಿಕೆಗಳಿಗೆ ಪರ್ಯಾಯ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಸೂಕ್ತವಾದುದನ್ನು ಆರಿಸಿ ಬರೆಯಿರಿ.

1.ಪಂಜಾಬಿನ ಸಿಂಹ ಎಂದು ಪ್ರಸಿದ್ಧನಾದವನು_________

1)ರಣಜಿತ್ ಸಿಂಗ್ 2)ದುಲಿಪ್ ಸಿಂಗ್ 3)ಲಾಲ್ ಸಿಂಗ್ 4)ಹರಿಸಿಂಗ್

2."ಎ" ಪಟ್ಟಿಯಲ್ಲಿ ಭಾರತದ ಸ್ಥಳಗಳು ಮತ್ತು "ಬಿ" ಪಟ್ಟಿಯಲ್ಲಿ ವಿಲೀನಗೊಂಡ ವರ್ಷವನ್ನು ಸೂಚಿಸಲಾಗಿದೆ. ಇವುಗಳು ಸರಿಹೊಂದುವ ಉತ್ತರದ ಗುಂಪು.

| | |
|---|---|
| 1.ಜುನಾಘಡ | ಎ)ಕ್ರಿ.ಶ 1948 |
| 2.ಹೈದರಾಬಾದ್ | ಬಿ)ಕ್ರಿ.ಶ 1949 |
| 3.ಪಾಂಡಿಚೇರಿ | ಸಿ)ಕ್ರಿ.ಶ.1961 |
| 4.ಗೋವಾ | ಡಿ)ಕ್ರಿ.ಶ.1954 |

ಉತ್ತರಗಳು:

1)1-ಡಿ, 2-ಸಿ, 3-ಎ, 4-ಬಿ

2)1-ಬಿ, 2-ಎ, 3-ಡಿ, 4-ಸಿ

3)1-ಎ, 2-ಬಿ, 3-ಸಿ, 4-ಎ

4)1-ಸಿ, 2-ಡಿ, 3-ಬಿ, 4-ಡಿ

3.ಭಾರತ ಮತ್ತು ಚೀನಾದ ಮಧ್ಯೆ ಮನಸ್ತಾಪ ಉಂಟಾಗಲು ಕಾರಣ_________

1)ಶಸ್ತ್ರಾಸ್ತ್ರಗಳ ಕಳ್ಳಸಾಗಾಣೆ 2)ಮಾದಕ ವಸ್ತು ಸಾಗಾಣೆ
3)ಮಾವೋವಾದಿಗಳ ನಕ್ಸಲ್ ವಾದ 4)ಭಯೋತ್ಪಾದನೆ

4.ವಿಶ್ವಸಂಸ್ಥೆಯ ಈಗಿನ ಮಹಾಕಾರ್ಯದರ್ಶಿ________

1)ಯು.ಥಾಂಟ್ 2)ಬೌತ್ರೋಸ್ ಘಾಲಿ 3)ಕೋಫಿ-ಎ-ಅನ್ನಾನ್ 4)ಬಾನ್ ಕಿ ಮೂನ್

5. 2006ರಲ್ಲಿ ಸರ್ಕಾರ ಬಾಲ ಶ್ರಮ ನಿರ್ಮೂಲನಾ ಮತ್ತು ಪುನರ್ವಸತೀಕರಣ ಜಾರಿಗೆ ತಂದಿತು ಇದರ ಉದ್ದೇಶ_________

1)ಬಾಲಶ್ರಮಿಕರ ಶೋಷಣೆ ತಪ್ಪಿಸುವುದು. 2)ಬಾಲಕಾರ್ಮಿಕರ ಪತ್ತೆ 3)ಬಾಲಕಾರ್ಮಿಕರ ಶಿಕ್ಷಣ
4)ಬಾಲಕಾರ್ಮಿಕರ ಗುರುತಿಸುವಿಕೆ

6.ಒರಿಸ್ಸಾದ ಕಣ್ಣೀರಿನ ನದಿ__________

1)ಕೋಸೀ ನದಿ 2)ಮಹಾನದಿ 3)ತುಂಗಭದ್ರಾ ನದಿ 4)ಸಟ್ಲೇಜ್ ನದಿ

7.ಸುವರ್ಣಕ್ರಾಂತಿ ಎಂದು ಈ ಬೆಳೆಯ ಪ್ರಗತಿಗೆ ಕರೆಯಲಾಗಿದೆ.________

1)ಆಹಾರ ಬೆಳೆ 2)ವಾಣಿಜ್ಯ ಬೆಳೆ 3)ನಾರಿನ ಬೆಳೆ 4)ತೋಟಗಾರಿಕಾ ಬೆಳೆ

8.ಮಾನವ ಅಭಿವೃದ್ಧಿ ಸೂಚಿ ಈ ಕೆಳಗಿನ ಗುಣಮಟ್ಟವನ್ನು ಅಳೆಯಲು ರೂಪಿಸಲಾಗಿದೆ________

1)ಮಾನವ ಜೀವನದ ಗುಣಮಟ್ಟ 2)ಆರ್ಥಿಕ ಅಭಿವೃದ್ಧಿ 3)ಲಿಂಗ ಸಮಾನತೆ 4)ಸಾಮಾಜಿಕ ಅಭಿವೃದ್ಧಿ

9.ಸಾಮಾನ್ಯವಾಗಿ ಭವಿಷ್ಯಕಾಲದಲ್ಲಿ ಯಾವುದಾದರೊಂದು ನಿರ್ದಿಷ್ಟ ದಿನದಂದು ಹಿಂದಕ್ಕೆ ಪಡೆಯಲು ಈ ಖಾತೆಯನ್ನು ತೆರೆಯಲಾಗುತ್ತದೆ.________

1)ಉಳಿತಾಯ 2)ಚಾಲ್ತಿ ಖಾತೆ 3)ಆವರ್ತಕ ಠೇವಣಿ ಖಾತೆ 4)ನಿಶ್ಚಿತ ಠೇವಣಿ ಖಾತೆ

10.ರಿಲಯನ್ಸ್ ಸಂಸ್ಥೆಯ ಸ್ಥಾಪಕರು_________

1)ಧೀರೂಭಾಯಿ ಅಂಬಾನಿ 2)ಅನಿಲ್ ಅಂಬಾನಿ 3)ಮುಖೇಶ್ ಅಂಬಾನಿ 4)ಅಜೀಂ ಜಿ ಪ್ರೇಮ್

ಆ. ಒಂದು ವಾಕ್ಯದಲ್ಲಿ ಉತ್ತರಿಸಿರಿ. 1*14=14

1.ಮೌಖಿಕ ಆಕಾರಗಳು ಚರಿತ್ರೆಕಾರರಿಗೆ ವರಪ್ರಸಾದ.ಹೇಗೆ?

2.ಒರಿಸ್ಸಾದ ನಿರಾಶ್ರಿತರ ಸಮಸ್ಯೆಯನ್ನು ಬಗೆಹರಿಸಿದ್ದು ಈ ಯೋಜನೆಯಾಗಿದೆ?

3.ಕಾರ್ಲ್ ಮಾರ್ಕ್ಸ್ ನ ಸಮಾಜವಾದವನ್ನು ಮೊತ್ತಮೊದಲು ಜಾರಿಗೆ ತಂದ ದೇಶ ಯಾವುದು?

4.ಸರ್ವ ಶಿಕ್ಷಣ ಅಭಿಯಾನ ಕಾರ್ಯ ಯೋಜನೆ ಜಾರಿಗೊಳಿಸಲು ಕಾರಣವೇನು?

5.ಶಸ್ತ್ರಗಳನ್ನು ಹೊಂದಿದ ದೇಶ ಹಣ,ಕಾರ್ಮಿಕರ ಬೆವರನ್ನು ,ವಿಜ್ಞಾನಿಗಳ ಬುಧ್ಧಿವಂತಿಗೆಯನ್ನು ಹಾಗೂ ಮಕ್ಕಳ ಆಸೆಗಳನ್ನು ವ್ಯಯಗೊಳಿಸುತ್ತದೆ. ಈ ಪ್ರಸಿಧ್ಧ ವಾಕ್ಯ ಯಾರದ್ದು?

6.ಪೂರ್ವಗ್ರಹ ಎಂದರೇನು?

7.ಬಾಲ ಕಾರ್ಮಿಕರ ದುಡಿಯುವ ಕ್ಷೇತ್ರದಿಂದ ಹೊರತಂದು ಅವರ ಅಭಿವೃಧ್ಧಿಗೆ ಭಾರತ ಸರ್ಕಾರ ಕೈಗೊಂಡ ಕ್ರಮವೇನು?

8.ಬಂಗಾಳಕೊಳ್ಳಿಯಲ್ಲಿ ಯಾವಕಾಲದಲ್ಲಿ ಚಂಡಮಾರುತಗಳು ಏಳುತ್ತವೆ?

9.ಖರೀಫ್ ಬೇಸಾಯ ಎಂದರೇನು?

10.ಬಾಕ್ಸೈಟ್ ಅದ್ಭುತ ಲೋಹ ಏಕೆ?

11.ಭದ್ರಾವತಿ ಉಕ್ಕಿನ ಕಾರ್ಖಾನೆ ಈಗಿನ ಹೆಸರೇನು?

12.ಸ್ವಾತಂತ್ರ್ಯ ಪೂರ್ವ ಭಾರತ ಬಡರಾಷ್ಟ್ರವಾಗಿತ್ತು ಕಾರಣವೇನು?

13.ಪ್ರತ್ಯಕ್ಷ ತೆರಿಗೆ ಎಂದರೇನು?

14.ಜೆಟ್ ವಾಯು ಮಾರ್ಗವನ್ನು ಹುಟ್ಟು ಹಾಕಿದ ಉಮೇದುದಾರನು ಯಾರು?

ಇ. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿರಿ. 2*15=30

1.ಭಾರತದೊಂದಿಗೆ ಯುರೋಪಿಯನ್ನರ ವ್ಯಾಪಾರ ಹೇಗೆ ನಡೆಯುತ್ತಿತ್ತು ?

2.ಹೈದರಾಲಿಯು ಬ್ರಿಟೀಷರೊಂದಿಗೆ ಹೇಗೆ ಹೋರಾಡಿದನು?

3.ಬ್ರಹ್ಮ ಸಮಾಜದ ಬೋಧನೆಗಳಾವುವು?

4.ಶೀತಲ ಸಮರ ಎಂದರೇನು?

5.ಕಳ್ಳ ಸಾಗಾಣಿಕೆ ನಿಯಂತ್ರಣಕ್ಕೆ ನಿಮ್ಮ ಎರಡು ಸಲಹೆಯನ್ನು ಬರೆಯಿರಿ.

6.ಭಯೋತ್ಪಾದನೆಯಿಂದ ಉಂಟಾಗುವ ಪರಿಣಾಮಗಳೇನು?

7.ಜನಮಂದೆಯ ಸ್ವರೂಪವನ್ನು ತಿಳಿಸಿ?

8.ಹಿಮಾಲಯ ಪರ್ವತದ ಪ್ರಯೋಜನವನ್ನು ತಿಳಿಸಿ .

9.ಭಾರತದಲ್ಲಿ ಕಂಡುಬರುವ ಮಣ್ಣಿನ ಪ್ರಮುಖ ಪ್ರಕಾರಗಳು ಯಾವುವು?

10.ಅರಣ್ಯ ಸಂರಕ್ಷಣೆ ಎಂದರೇನು?

11.ಸಂಪರ್ಕ ಮಾಧ್ಯಮ ಎಂದರೇನು?

12.ಭೂಕಂಪ ಎಂದರೇನು?

13.ಜನಸಾಂದ್ರತೆ ಎಂದರೇನು?

14.ಹಸಿರು ಕ್ರಾಂತಿ ಬಗ್ಗೆ ಬರೆಯಿರಿ.

15.ಜಾಗತಿಕರಣ ಎಂದರೇನು?

ಈ. ಕೆಳಗಿನ ಪ್ರಶ್ನೆಗಳಿಗೆ ಆರರಿಂದ ಎಂಟು ವಾಕ್ಯದಲ್ಲಿ ಉತ್ತರಿಸಿರಿ.6*3=18

1.ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಆರ್ಥಿಕ ಮತ್ತು ಆಡಳಿತಾತ್ಮಕ ಅಂಶಗಳು ಹೇಗೆ ಕಾರಣವಾಗುತ್ತವೆ?

ಅಥವಾ

ಭಾರತದ ನವ ಜಾಗೃತಿಯ ಉದಯಕ್ಕೆ ಪತ್ರಿಕೆಗಳು ಹೇಗೆ ಕಾರಣವಾಗುತ್ತವೆ?

2.ಭಾರತದ ವಿದೇಶಾಂಗ ನೀತಿಯ ಮೂಲ ಉದ್ದೇಶವೇನು?

ಅಥವಾ

ಭಾರತ ಮತ್ತು ಅಮೇರಿಕಾ ಸಂಯುಕ್ತ ಸಂಸ್ಥಾನದ ನಡುವಿನ ಸಂಬಂಧವನ್ನು ವಿವರಿಸಿರಿ.

3.ಭಾರತದಲ್ಲಿ ಅಸ್ಪೃಶ್ಯತಾ ನಿವಾರಣೆಗೆ ಸರಕಾರ ಕೈಗೊಂಡಿರುವ ಕ್ರಮಗಳೇನು?

ಅಥವಾ

ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸವೇನು?

4.ರಸ್ತೆಸಾರಿಗೆಯಲ್ಲಿ ಕಂಡುಬರುವ ಘಟಕಗಳು ಯಾವುವು?

ಅಥವಾ

ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?

5.ಭಾರತ ಕೇಂದ್ರ ಸರ್ಕಾರ ಗಳಿಸುವ ಪ್ರಮುಖ ತೆರಿಗೆಯೇತರ ಆದಾಯ ಯಾವುದು?

ಅಥವಾ

ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರವೇನು?

6.ಬ್ಯಾಂಕ್ ಖಾತೆಯು ಅನುಕೂಲಕರವಾದದ್ದು ಹೇಗೆ?

ಅಥವಾ

ಜೀವ ವಿಮೆಯು ಅನುಕೂಲಕರವಾದದ್ದು ಏಕೆ?

ಉ. ಕೆಳಗಿನ ಪ್ರಶ್ನೆಗೆ ಎಂಟರಿಂದ ಹತ್ತು ವಾಕ್ಯದಲ್ಲಿ ಉತ್ತರಿಸಿರಿ. 4*1=4

ಸ್ವಾತಂತ್ರ್ಯ ಚಳುವಳಿಯಲ್ಲಿ ಬಾಲಗಂಗಾಧರ ತಿಲಕರ ಪಾತ್ರವೇನು?

ಊ. ಭಾರತದ ನಕಾಶೆಯನ್ನು ಬರೆದು ಕೆಳಗಿನವುಗಳನ್ನು ಗುರುತಿಸಿರಿ. 4*1=4

231/2 ಉತ್ತರ ಅಕ್ಷಾಂಶ , ನವಶೇವಾ , ನರ್ಮದಾ ನದಿ

***********************************

ರಚಿಸಿದ ಶಿಕ್ಷಕರು:

1.ಶ್ರೀಮತಿ ಕವಿತಾ ಸ.ಸಂ.ಪ್ರೌ. ಶಾಲೆ ಅಂಗರಗುಂಡಿ, ಬೈಕಂಪಾಡಿ

2.ಸುಮಂಗಲಾ ಕೆ ಸ.ಪ್ರೌ,ಶಾಲೆ ಬೆಟ್ಟಂಪಾಡಿ

3.ಶಿವಾನಂದ ಯಾದನೂರ ಸ,ಪ್ರೌ,ಶಾಲೆ ಅಳದಂಗಡಿ,ಬೆಳ್ತಂಗಡಿ